**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ , ಪಿರಿಯಾಪಟ್ಟಣ**

**ಸಿಸಿ. ಸಂಃ 13 /2017**

| | | | |
|---|---|---|---|
| **ಹೆಸರು** | : | **ಜಲಜಾಕ್ಷಿ ಹೆಚ್.ಎಂ.** | **ಪಿಡಬ್ಲೂಃ 05** |
| **ತಂದೆ/ಗಂಡನ ಹೆಸರು** | : | **ಉಮೇಶ್** | |
| **ವಯಸ್ಸು** | : | **57 ವರ್ಷ** | |
| **ಉದ್ಯೋಗ** | : | **ಸಹ ಶಿಕ್ಷಕಿ** | |
| **ವಾಸಸ್ಥಳ** | : | **ಕುಶಾಲ ನಗರ** | |

**ದಿಃ *06.04.2023* ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಿದೆ.**

**ಮುಖ್ಯ ವಿಚಾರಣೆ ಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು ದಿನಾಂಕ *01.06.1993* ರಿಂದ ನಾನು ಮಿಳಿಂದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಹ ಶಿಕ್ಷಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ನಾನು ಕೆಲಸಕ್ಕೆ ಸೇರಿದಾಗ ಸಂಸ್ಥೆಯ ವ್ಯವಹಾರವನ್ನು ದೊಡ್ಡಣ್ಣರವರು ನೋಡಿಕೊಳ್ಳುತ್ತಿದ್ದರು. ನನಗೆ ಕೆಲಸಕ್ಕೆ ಸೇರಿಸಿಕೊಂಡವರು ದೊಡ್ಡಣ್ಣರವರು ಅವರೆ ಎಲ್ಲಾ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದರು. ಸುಮಾರು *10* ವರ್ಷಗಳ ವರೆಗೆ ನಾವು ದೊಡ್ಡಣ್ಣರವರೇ ಸಂಸ್ಥೆಯ ಮುಖ್ಯಸ್ಥರೆಂದು ತಿಳಿದುಕೊಂಡಿದ್ದೆವು. ಪ್ರೊಫೇಸರ್ ಲಕ್ಷ್ಮಿಸಾಗರ್ ರವರ ಹೆಸರಿನಲ್ಲಿ ಕಟ್ಟಿದ ಕಟ್ಟಡದ ಉದ್ಘಾಟನೆಯ ಸಮಯದಲ್ಲಿ ನಮಗೆ ಗೋವಿಂದಯ್ಯರವರು ಸಂಸ್ಥೆಯ ವ್ಯವಸ್ಥಾಪಕ ಧರ್ಮದರ್ಶಿ ಆಗಿದ್ದಾರೆಂದು ಗೊತ್ತಾಯಿತು. ನಾವು ವಿಧ್ಯಾರ್ಥಿಗಳಿಂದ ಶಾಲಾಶುಲ್ಕ ಮತ್ತು ಮಾಸಿಕ ಶುಲ್ಕವನ್ನು ಪಡೆದುಕೊಂಡು ದೊಡ್ಡಣ್ಣರವರಿಗೆ ಕೊಡುತ್ತಿದ್ದೆವು. ಅವರಿಗೆ ಹಣ ಕೊಟ್ಟ ಬಗ್ಗೆ ಯಾವುದೇ ರಸೀದಿ ಕೊಡುತ್ತಿರಲಿಲ್ಲ ಅದರೆ ನೋಟ್ ಪುಸ್ತಕದಲ್ಲಿ ಬರೆದು ದೊಡ್ಡಣ್ಣರವರ ಸಹಿ ಪಡೆದುಕೊಳ್ಳುತ್ತಿದ್ದೆವು. ಸದರಿ ನೋಟ್ ಪುಸ್ತಕ ಮುಖ್ಯಶಿಕ್ಷಕರ ಬಳಿ ಇರುತ್ತಿತ್ತು ಅವರು ಅದನ್ನು ದೊಡ್ಡಣ್ಣರವರ ಬಳಿ ಕೊಡುತ್ತಿದ್ದರು.

*2006* ನೇ ಸಾಲಿನಲ್ಲಿ ಶಾಲಾ ವಾಹನವನ್ನು ಖರೀದಿ ಮಾಡಬೇಕು ಎಂದು ನಮ್ಮ ಕಡೆಯಿಂದ ಹಣವನ್ನು ದೊಡ್ಡಣ್ಣರವರು ವಸೂಲಿ ಮಾಡಿರುತ್ತಾರೆ. ನಾನು *3* ವರ್ಷದಲ್ಲಿ ಕಂತುಗಳ ಆಧಾರದ ಮೇಲೆ ರೂ.*99,500/-* ಗಳನ್ನು ದೊಡ್ಡಣ್ಣರವರಿಗೆ ಕೊಟ್ಟಿರುತ್ತೇನೆ. ಹಣ ಕೊಟ್ಟ ಬಗ್ಗೆ ಅವರು ಯಾವುದೇ

ರಸೀದಿ ಕೊಟ್ಟಿಲ್ಲ. ದೊಡ್ಡಣ್ಣರವರು ನಮಗೆ ಇನ್ನು ಹಣ ಕೇಳುತ್ತಿದ್ದ ಕಾರಣ ಮತ್ತು ಹಣ ಕೊಡಲು ಕಷ್ಟ ಇದ್ದ ಕಾರಣ ನಾವು ವಿಷಯವನ್ನು ಗೋವಿಂದಯ್ಯರವರಿಗೆ ಲಿಖಿತ ರೂಪದಲ್ಲಿ ಕೊಟ್ಟಿರುತ್ತೇವೆ. ಲಿಖಿತ ರೂಪದಲ್ಲಿ ಕೊಟ್ಟ ದಾಖಲೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನಿ.ಪಿ.23 ರಲ್ಲಿರುವ ಜೆರಾಕ್ಸ್ ದಾಖಲೆಯನ್ನು ನೋಡಿ ಗುರುತಿಸಿರುತ್ತಾರೆ.

2006 ರಲ್ಲಿ ಸಂಸ್ಥೆಯ ವ್ಯವಸ್ಥಾಪಕ ಧರ್ಮದರ್ಶಿಗಳಾದ ಗೋವಿಂದಯ್ಯರವರು, ಆಡಿಟರ್ , ದೊಡ್ಡಣ್ಣ, ಮತ್ತು ಸಹ ಶಿಕ್ಷಕರ ಸಭೆಯನ್ನು ಕರೆದಿದ್ದರೂ. ಸದರಿ ಸಭೆಯಲ್ಲಿ ಶಾಲೆಗೆ ಬರುವಂತಹ ಹಣವನ್ನು ಬ್ಯಾಂಕಿಗೆ ಜಮಾ ಮಾಡಿ ಅಲ್ಲಿಂದಲೇ ಖರ್ಚು ವೆಚ್ಚಗಳನ್ನು ಮಾಡಬೇಕು ಎಂದು ತೀರ್ಮಾನ ಮಾಡಿದರು. ಸದರಿ ತೀರ್ಮಾನದ ನಂತರ ಶಾಲಾ ಶುಲ್ಕಕ್ಕೆ ಮಾತ್ರ ದೊಡ್ಡಣ್ಣರವರು ರಸೀದಿ ಕೊಡುತ್ತಿದ್ದರು, ಬೇರೆ ಹಣಕ್ಕೆ ರಸೀದಿ ಕೊಡುತ್ತಿರಲಿಲ್ಲ. ವಾಹನ ಶುಲ್ಕಕ್ಕೂ ಸಹ ರಸೀದಿ ಕೊಡುತ್ತಿರಲಿಲ್ಲ. 2009 ನೇ ಸಾಲಿನಲ್ಲಿ ಪುನಃ ಸಭೆಯನ್ನು ಮಾಡಿದರು. ಸಭೆಯಲ್ಲಿ ಕಡ್ಡಾಯವಾಗಿ ಶಾಲೆಗೆ ಬರುವ ಹಣವನ್ನು ಬ್ಯಾಂಕಿಗೆ ಜಮಾ ಮಾಡಿ ಅಲ್ಲಿಂದಲೇ ಖರ್ಚುವೆಚ್ಚವನ್ನು ಮಾಡಬೇಕು ಎಂದು ಮೆಮೋ ಹಾಕಿರುತ್ತಾರೆ. ಅದರ ಬಗ್ಗೆ ಯಾವ ಯಾವ ಶಿಕ್ಷಕರು ಏನೇನು ಕೆಲಸ ಮಾಡಬೇಕು ಎಂದು ಸುತ್ತೋಲೆ ಹಾಕಿದರು. ಸುತ್ತೋಲೆ ನೋಡಿದರೆ ಗುರುತಿಸುತ್ತೇನೆ.

ಸಾಕ್ಷಿ ನಿ.ಪಿ.08 ದಾಖಲೆ ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನಿ.ಪಿ.08 ರಲ್ಲಿನ ತಮ್ಮ ಸಹಿ ನೋಡಿ ಗುರುತಿಸಿದ್ದು. ಸದರಿ ಸಹಿಯನ್ನು ನಿ.ಪಿ.08(ಎ) ಎಂದು ಗುರುತಿಸಲಾಯಿತು. ದೊಡ್ಡಣ್ಣರವರಿಗೆ ಹಣಕೊಟ್ಟ ಬಗ್ಗೆ ಬರೆದಿರುವ ಹಾಳೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನಿ.ಪಿ.42 ರಲ್ಲಿರುವ 4 ಹಾಳೆಗಳನ್ನು ನೋಡಿ ಗುರುತಿಸಿರುತ್ತಾರೆ. 2 ನೇ ಹಾಳೆಯಲ್ಲಿ ಅರ್ಧ ಭಾಗ ನನ್ನ ಹಸ್ತಾಕ್ಷರ ಇರುವುದಿಲ್ಲ.

ನಿ.ಪಿ.42 ರ ಎರಡನೇ ಹಾಳೆಯಲ್ಲಿ ದೊಡ್ಡಣ್ಣರವರು ಸಹಿಗಳನ್ನು ಮಾಡಿರುತ್ತಾರೆ. ಸದರಿ 4 ಹಾಳೆಗಳನ್ನು ನಿ.ಪಿ.42(ಎ) ಯಿಂದ ನಿ.ಪಿ.42(ಡಿ) ಎಂದು ಗುರುತಿಸಲಾಯಿತು. ನಿ.ಪಿ.42(ಬಿ)ನಲ್ಲಿರುವ ದೊಡ್ಡಣ್ಣರವರ ಸಹಿಗಳನ್ನು ಒಟ್ಟಾಗಿ ನಿ.ಪಿ.(ಬಿ1) ಎಂದು ಗುರುತಿಸಲಾಯಿತು.

ದೊಡ್ಡಣ್ಣರವರಿಗೆ ಶಾಲಾ ವಾಹನದ ಖರೀದಿಸಲು ಹಣ ಕೊಟ್ಟ ಬಗ್ಗೆ ನಾನು ಸಹಿ ಮಾಡಿರುವ ದಾಖಲೆ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನಿ.ಪಿ.18 ರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು. ಸದರಿ ಸಹಿಯನ್ನು ನಿ.ಡಿ.18(ಬಿ) ಎಂದು ಗುರುತಿಸಲಾಯಿತು. ಮೆಮೋ ಪ್ರಕಾರ ನಾವು ಕಾರ್ಯ ನಿರ್ವಹಿಸುತ್ತಿದ್ದೆವು ಅದಕ್ಕೆ ದೊಡ್ಡಣ್ಣರವರು ಆ ಪ್ರಕಾರ ಕಾರ್ಯ ನಿರ್ವಹಿಸಬಾರದು ಎಂದು ತಕರಾರು ಮಾಡಿರುತ್ತಾರೆ. ಆ ಕಾರಣಕ್ಕೆ ನಾವು ಸಂಸ್ಥೆಯ ವ್ಯವಸ್ಥಾಪಕ ಧರ್ಮದರ್ಶಿಗಳಿಗೆ ಲಿಖಿತವಾಗಿ ದೂರನ್ನು ಸಲ್ಲಿಸಿದೆವು. ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನಿ.ಪಿ.20 ರಲ್ಲಿರುವ 14 ದೂರುಗಳ ಪೈಕಿ 8 ದೂರುಗಳಲ್ಲಿರುವ ತಮ್ಮ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿಗಳನ್ನು ಒಟ್ಟಾಗಿ ನಿ.ಪಿ.20(ಎ) ಎಂದು ಗುರುತಿಸಲಾಯಿತು. ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ಸಿದ್ದೇಗೌಡರವರು ವಿಚಾರಣೆ ಮಾಡಿರುತ್ತಾರೆ. ಅವರ ಸಮಕ್ಷಮ ಹೇಳಿಕೆ ಕೊಟ್ಟು ಸಹಿ ಮಾಡಿರುತ್ತೇನೆ. ನಿ.ಪಿ.41 ರಲ್ಲಿರುವ ಸಾಕ್ಷಿಯ ಹೇಳಿಕೆಯನ್ನು ನಿ.ಪಿ.41(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲು ಸಮಯಕೋರಿದ್ದು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**